**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 3189/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ 28.07.2026** **ಸಿಡಬ್ಲ್ಯೂ 3**

| | |
|---|---|
| ಹೆಸರು | ಮಹೇಶರೆಡ್ಡಿ |
| ತಂದೆಯ ಹೆಸರು | ಯಲ್ಲಪ್ಪರೆಡ್ಡಿ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕಡ್ಲೆಗೊಂದಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ನಮ್ಮ ಹೊಲಕ್ಕೆ ಹೋಗುತ್ತಿರುವಾಗ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ನಿಪಿ.2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.2 ಬಿ, ಸಾಕ್ಷಿಯು ನಿಪಿ.5 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.5 ಬಿ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳು ನಿಪಿ.3, 4, 6 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ10.01.2025 ರಂದು ಹರಿಹರ ಗ್ರಾಮಾಂತರ ಪೋಲೀಸರು ಕಡ್ಲೆಗೊಂದಿ ಗ್ರಾಮದ ಸ.ನಂ.67/3 ರ ಜಮೀನಿನಲ್ಲಿ ನನ್ನನ್ನು ಮತ್ತು ಮಹದೇವಗೌಡರನ್ನು ಪಂಚನಾಮೆಗಾಗಿ ಕರೆಸಿರುತ್ತಾರೆ ಎಂದರೆ ಸರಿ. ನಮಗೆ ನೋಟೀಸ್ ಕೊಟ್ಟು ಪಂಚನಾಮೆ ವಿಷಯ ತಿಳಿಸಿದ್ದರಿಂದ ನಾವು ಒಪ್ಪಿಕೊಂಡು ಅಲ್ಲಿಗೆ ಹೋದಾಗ ಶ್ರೀಮತಿ ಸರೋಜಮ್ಮರವರು ಅಲ್ಲಿಗೆ ಬಂದು ಸರೋಜಮ್ಮರವರು ಅಲ್ಲಿಗೆ ಬಂದು ನಾವು ಉಳುಮೆ ಮಾಡುತ್ತಿರುವಾಗ ನನ್ನ ಚಿಕ್ಕಮಗ ಮಂಜುನಾಥ ಹಾಗೂ ಅವರ ಹೆಂಡತಿ ಶ್ರೀಲತಾ ಇಬ್ಬರೂ ಪಾಲುವಿಭಾಗಕ್ಕಾಗಿ ಜಗಳ ತೆಗೆದು ನಮ್ಮೆಲ್ಲರಿಗೂ ಹೊಡೆದ ಸ್ಥಳ ಇದೇ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ.1 ರವರು ಒಂದು ಸಲಿಕೆ ಮತ್ತು ಒಂದು ಹಿಡಿ ಗಾತ್ರದ ಕಲ್ಲನ್ನು ಕೊಟ್ಟಿರುತ್ತಾರೆ ಆ ಸಮಯದಲ್ಲಿ ಸಂಜೆ 4 ರಿಂದ 4.45 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ ನಮ್ಮನ್ನು ಮಂಜುನಾಥನ ಮನೆ ಮುಂದೆ ಹೋಗಿ ಚಾಸಾ.1 ರವರು ಓಮ್ನಿ ವಾಹನ ಸಂ.ಕೆಎ–17 ಜಡ್–8469 ವಾಹನವನ್ನು ತೋರಿಸಿ ಇದೇ

ವಾಹನದಿಂದ ನನ್ನ ಮೇಲೆ ಹತ್ತಿಸಲು ಪ್ರಯತ್ನಿಸಿರುತ್ತಾನೆ ಎಂದು ಹೇಳಿದ್ದರಿಂದ ಪೋಲೀಸರು ಸದರಿ ವಾಹನವನ್ನು ಸಂಜೆ 5 ರಿಂದ 5.45 ಗಂಟೆವರೆಗೆ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರಿಂದಃ ಇರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.